**ಪಿ. ಡಬ್ಲ್ಯೂ - 01**

**ದಿನಾಂಕಃ19-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ಪ್ರತಿವಾದಿಯ ಪರ ಶ್ರೀ.ಆರ್.ಪಿ, ವಕೀಲರಿಂದ:-**

**1.** ನನ್ನ ತಂದೆಯ ಹೆಸರು ಗಂಗಾಬೋವಿ ಉ. ಗಂಗಯ್ಯ ಆಗಿದೆ. ನಿಮ್ಮ ತಂದೆಯ ಹೆಸರು ಗುಡ್ಡಿಗಂಗಾಬೋವಿ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನನ್ನ ತಂದೆಗೆ ಒಟ್ಟು ಇಬ್ಬರು ಮಕ್ಕಳು ಇದ್ದಾರೆ. ನಿಮ್ಮ ಹಂಡತಿಯ ಹೆಸರು ಡಿ ಅನುಸೂಯ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮ್ಮ ಮಗಳ ಹೆಸರು ಅನುಸೂಯ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈಗ ಸಾಕ್ಷಿಗೆ ಪ್ರಕರಣ ಸಂ.ಪಿ.ಟಿ.ಸಿ.ಎಲ್(ಎಂ)4/2007-08 ರ ಪ್ರಕರಣದಲ್ಲಿ ಹೊರಡಿಸಿರುವ ಆದೇಶದ ದೃಢೀಕೃತ ನಕಲನ್ನು ತೋರಿಸಿದ್ದು, ಸದರಿ ಪ್ರಕರಣವನ್ನು ನೀವು ದಾಖಲಿಸಿರುತ್ತೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಂತೆ ನಿಮ್ಮ ತಂದೆಯ ಹೆಸರು ಗುಂಡಿ ಗಂಗಾಬೋವಿ ಎಂದರೆ ಸಾಕ್ಷಿಯು ತನ್ನ ತಂದೆಯ ಹೆಸರು ಗಂಗಾಬೋವಿ ಉ. ಗಂಗಯ್ಯ ಮತ್ತು ತನ್ನ ಅಜ್ಜಿಯ ಹೆಸರು ಗುಡ್ಡಮ್ಮ ಉ. ಗುಡ್ಡಿ ಆಗಿತ್ತು, ಅದರಿಂದ ತನ್ನ ತಂದೆಗೆ ಗುಡ್ಡಿಗಂಗಾಬೋವಿ ಎಂಬ ಹೆಸರು ಬಂದಿತ್ತು ಮತ್ತು ಅದನ್ನು ತಾನು ಸರಿಪಡಿಸಿಕೊಂಡಿದ್ದೇನೆ ಎನ್ನುತ್ತಾರೆ. ನಿಡಿ-1 ರ ಪ್ರಕರಣದಲ್ಲಿ ನಿಮಗೆ ಸರ್ವೆ ನಂ.150 ಕ್ಕೆ ಸಂಬಂಧಿಸಿದಂತೆ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

2. ನನ್ನ ತಂದೆಗೆ ಎಷ್ಟು ಜನ ಅಣ್ಣ ತಮ್ಮಂದಿರು ಇದ್ದರು ಎಂಬುವುದರ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ತಂದೆಯ ತಂದೆಯ ಹೆಸರು ದಾಸಬೋವಿ ಆಗಿದೆ. ಪ್ರತಿವಾದಿಯ ತಂದೆಯ ಹೆಸರು ದಾಸಪ್ಪ ಎಂದರೆ

ಸಾಕ್ಷಿಯು ಹೌದು ಎನ್ನುತ್ತಾರೆ. ಪ್ರತಿವಾದಿಯ ತಂದೆ ನನಗೆ ಸಂಬಂಧಿಕರಾಗಿರುವುದಿಲ್ಲ. ಪ್ರತಿವಾದಿಯ ತಂದೆಯು ನಿಮ್ಮ ತಂದೆಯ ಅಣ್ಣನ ಮೊಮ್ಮಗ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮ್ಮ ತಾತನಿಗೆ 3 ಜನ ಗಂಡು ಮಕ್ಕಳು ಇದ್ದಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಈಗ ಸಾಕ್ಷಿಗೆ ನಿಪಿ-5 ನ್ನು ತೋರಿಸಿದ್ದು, ಅದರಲ್ಲಿ ಗಂಗಾಬೋವಿ ಬಿನ್ ದಾಸಬೋವಿ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-5 ರಲ್ಲಿ ನಮೂದಿಸಿರುವ ಗಂಗಾಬೋವಿ ಬಿನ್ ದಾಸಬೋವಿ ರವರು ನಿಮ್ಮ ತಾತನ ಮೊದಲನೇ ಮಗ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**